# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 690

ಸದಸ್ಯರ ಹೆಸರು : ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 21.02.2023

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ವಿಶ್ವವಿಖ್ಯಾತ ಬೀದರ್ ಬಿದ್ರಿ ಕಲೆ ನಶಿಸಿತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಿದ್ರಿ ಕಲಾಕೃತಿ ತಯಾರಿಸುವವರ ಬದುಕು ಶೋಚನೀಯವಾಗಿದ್ದು ಸದರಿ ಕಲೆಯನ್ನು ಪ್ರೋತ್ಸಾಹಿಸಲು ಸರ್ಕಾರ ಹಮ್ಮಿಕೊಂಡ ಯೋಜನೆಗಳು ಯಾವುವು; | ಬಿದ್ರಿ ಕಲೆಯನ್ನು ಪ್ರೋತ್ಸಾಹಿಸಲು ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ:<br>➢ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕರಕುಶಲ ಕಲೆಗೆ ಬೆಂಬಲ ಯೋಜನೆಯಡಿಯಲ್ಲಿ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಬೆಳ್ಳಿ ಮತ್ತು ಸತುವನ್ನು ಬೀದರ್‌ನ ನೊಂದಾಯಿತ ಕರಕುಶಲಕರ್ಮಿಗಳಿಗೆ ವಿತರಿಸಲಾಗುತ್ತಿದೆ. ಅಲ್ಪಪರಿಚಿತ ವಸ್ತುಗಳಾದ ಬಿದ್ರಿ ಕಲಾಕೃತಿಗಳಿಗೆ ಶೇ. 20 ರಷ್ಟು ರಿಯಾಯಿತಿಯನ್ನು ನಿಗಮದ 11 ಕಾವೇರಿ ಮಾರಾಟ ಮಳಿಗೆಗಳಿಂದ ಖರೀದಿಸುವ ಗ್ರಾಹಕರಿಗೆ ನೀಡಲಾಗುತ್ತದೆ.<br>➢ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವತಿಯಿಂದ ಬೀದರ್‌ನ ನೊಂದಾಯಿತ ಕರಕುಶಲಕರ್ಮಿಗಳಿಗೆ ಡಿ.ಎ.ಪಿ, ವಿಶ್ವ ಮತ್ತು ಡಿ.ಸಿ.(ಹೆಚ್) ಯೋಜನೆಯಡಿಯಲ್ಲಿ 193 ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿರುತ್ತದೆ. ಅದರಲ್ಲಿ 38 ಕರಕುಶಲಕರ್ಮಿಗಳಿಗೆ ಈಗಾಗಲೇ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ.<br>➢ ಬೀದರ್‌ನಲ್ಲಿ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ನಿರ್ಮಿಸಲಾಗಿದೆ. ವಿನ್ಯಾಸ ಮತ್ತು ತಾಂತ್ರಿಕ ಅಭಿವೃದ್ಧಿ ಕಾರ್ಯಾಗಾರವನ್ನು ಆಯೋಜಿಸಿ ನೊಂದಾಯಿತ ಕರಕುಶಲಕರ್ಮಿಗಳಿಗೆ ತರಬೇತಿಯನ್ನು ನೀಡಲಾಗಿದೆ.<br>➢ ಸಾಮಾನ್ಯ ಸೌಲಭ್ಯ ಕೇಂದ್ರದೊಂದಿಗೆ ತರಬೇತಿಯನ್ನು ಬಿದರಿ ಕಲಾ ಸಂಕೀರ್ಣ, ಬೀದರ್‌ನಲ್ಲಿ ನಿರ್ಮಿಸಲು 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ.<br>➢ ರಾಜ್ಯ ಸರ್ಕಾರವು ಕುಶಲಕರ್ಮಿಗಳಿಗೆ ಸಾಲ - ಸಹಾಯಧನ ಎಂಬ ಹೊಸ ಯೋಜನೆಯನ್ನು 2022-23ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಯೋಜನೆಯಡಿ ಕುಶಲಕರ್ಮಿಗಳಿಗೆ ಬ್ಯಾಂಕಿನಿಂದ ರೂ.50,000/- ಸಾಲ ಹಾಗೂ ಶೇ.30 ರಷ್ಟು ಗರಿಷ್ಠ ರೂ.15,000/- ಗಳ ಸಹಾಯಧನ ನೀಡಲಾಗುವುದು. |

| | | |
|---|---|---|
| ಇ) | ಇಲ್ಲಿಯವರೆಗೆ ಎಷ್ಟು ಬಿದ್ರಿ ಕಲಾವಿದರಿಗೆ ಹಣಕಾಸಿನ ಸೌಲಭ್ಯ ನೀಡಿ ಈ ಕಲೆಯನ್ನು ಪ್ರೋತ್ಸಾಹಿಸಲಾಗಿದೆ; (ವಿವರ ನೀಡುವುದು) | 154 ನೊಂದಾಯಿತ ಕರಕುಶಲಕರ್ಮಿಗಳಿಗೆ ಹಣಕಾಸಿನ ಸೌಲಭ್ಯ ನೀಡಿ ಈ ಕಲೆಯನ್ನು ಪ್ರೋತ್ಸಾಹಿಸಲಾಗಿದೆ. |
| ಈ) | ಬಿದ್ರಿ ಕಲಾವಿದರು ತಯಾರಿಸಿದ ಕಲಾ ಕೃತಿಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಲಾಗಿದೆಯೇ; | 1. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಬಿದರಿ ಕರಕುಶಲಕರ್ಮಿಗಳನ್ನು ಉತ್ತೇಜಿಸಲು ಮತ್ತು ಬಿದರಿ ಕಲೆಯನ್ನು ಉಳಿಸಿ, ಬೆಳೆಸಲು ಪ್ರತಿ ತಿಂಗಳು ಬಿದರಿ ಕರಕುಶಲ ವಸ್ತುಗಳನ್ನು ನಿಗಮದಿಂದ ಖರೀದಿಸಿ ನಿಗಮವು ವಿವಿಧ ವ್ಯಾಪಾರ ಮಳಿಗೆಗಳಲ್ಲಿ ಮಾರಾಟ ಮಾಡುವುದರೊಂದಿಗೆ ರಾಜ್ಯದ ಅತ್ಯುನ್ನತ ಬಿದರಿ ಕಲೆಯನ್ನು 11 ಕಾವೇರಿ ಮಾರಾಟ ಮಳಿಗೆಗಳಿಗೆ ಭೇಟಿ ನೀಡುವ ಗ್ರಾಹಕರಿಗೆ ಪರಿಚಯಿಸಲಾಗುತ್ತಿದೆ.<br>2. ನೊಂದಾಯಿತ ಕರಕುಶಲಕರ್ಮಿಗಳನ್ನು ವಿವಿಧ ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಅನುವು ಮಾಡುತ್ತದೆ.<br>3. ಬಿದ್ರಿ ಕಲೆಯು ಒಂದು ಪಾರಂಪರಿಕ ಕಲೆಯಾಗಿದ್ದು, ಜಿ.ಐ. (Geographical Indication) ಗುರುತನ್ನು 2005ನೇ ಸಾಲಿನಲ್ಲಿ ನೊಂದಾಯಿಸಲಾಗಿರುತ್ತದೆ.<br>4. ಕಾವೇರಿ ಆನ್-ಲೈನ್ ಸೇಲ್ಸ್ ಮುಖಾಂತರ ವ್ಯಾಪಾರ ವಹಿವಾಟು ನಡೆಸಲಾಗುತ್ತಿದೆ.<br>5. ಫ್ಲಿಪ್ ಕಾರ್ಟ್, ಅಮೆಜಾನ್, ಆನ್-ಲೈನ್ ಮುಖಾಂತರ ವ್ಯಾಪಾರ ವಹಿವಾಟು ನಡೆಸಲಾಗುತ್ತಿದೆ.<br>6. ONDC (Open Network for Digital Commerce) ಮುಖಾಂತರ ಕರಕುಶಲ ವಸ್ತುಗಳನ್ನು ಮಾರಾಟ ಮಾಡಲು ಈಗಾಗಲೇ ಎಂ.ಎಸ್.ಎಂ.ಇ. ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ. |
| ಉ) | ಬಿದ್ರಿ ಕಲೆಯನ್ನು ಮತ್ತು ಕಲಾವಿದರನ್ನು ಉತ್ತೇಜಿಸಲು ಸಂರಕ್ಷಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆ? | ಬಿದ್ರಿ ಕಲೆಯನ್ನು ಮತ್ತು ಕಲಾವಿದರನ್ನು ಉತ್ತೇಜಿಸಿ ಸಂರಕ್ಷಿಸಲು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ತನ್ನ 11 ಕಾವೇರಿ ಮಾರಾಟ ಮಳಿಗೆಗಳಲ್ಲದೆ ಅಮೆಜಾನ್, ಫ್ಲಿಪ್ ಕಾರ್ಟ್ ಮತ್ತು ಕಾವೇರಿ ಆನ್-ಲೈನ್ ವೇದಿಕೆ ಮೂಲಕ ಬಿದರಿ ಕಲಾಕೃತಿಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಮಾರಾಟವಾಗುವಂತೆ ಪ್ರೋತ್ಸಾಹಿಸುತ್ತಿದೆ.<br><br>ರಾಜ್ಯ ಸರ್ಕಾರವು ಕುಶಲಕರ್ಮಿಗಳಿಗೆ ಸಾಲ - ಸಹಾಯಧನ ಎಂಬ ಹೊಸ ಯೋಜನೆಯನ್ನು 2022-23ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಯೋಜನೆಯಡಿ ಕುಶಲಕರ್ಮಿಗಳಿಗೆ ಬ್ಯಾಂಕಿನಿಂದ ರೂ.50,000/- ಸಾಲ ಹಾಗೂ ಶೇ.30 ರಷ್ಟು ಗರಿಷ್ಟ ರೂ.15,000/- ಗಳ ಸಹಾಯಧನ ನೀಡಲಾಗುವುದು. |

ಸಿಐ 38 ಸಿಎಸ್‌ಸಿ 2023

(ಎಸ್. ನಾಗರಾಜು (ಎಂ.ಟಿ.ಬಿ.))
ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು